ವಿಷಯ :- ಬೆಳಗಾವಿ ಜಿಲ್ಲೆಯ ಕಲಾವಿದರಿಗೆ ಮಾಸಾಶನ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2343 (2995)

ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) :- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಕಲಾವಿದರು ಹಾಗೂ ಜಾನಪದ ಕಲಾಕಾರರಿಂದ ಮಾಸಾಶನ ಮತ್ತು ಸಹಾಯಧನ ಕೋರಿ ಬಂದಂತಹ ಅರ್ಜಿಗಳೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಸದರಿ ಅರ್ಜಿಗಳ ಪೈಕಿ 1995-96 ರಲ್ಲಿ ಮಂಜೂರಾತಿ ಪಡೆದ ಅರ್ಜಿಗಳೆಷ್ಟು ; (ಅದರ ವಿವರ ನೀಡುವುದು) ;

ಇ) ಮಾಸಾಶನ ಅಥವಾ ಸಂಭಾಷಣೆ ಸಹಾಯ ಧನ ಮಂಜೂರು ಮಾಡುವಾಗ ಅನುಸರಿಸುವ ವಿಧಾನಗಳಾವುವು?

ಶ್ರೀಮತಿ ಬಿ. ಟಿ. ಲಲಿತಾ ನಾಯಕ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :-

ಅ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.

ಆ) 1995-96 ನೇ ಸಾಲಿನಲ್ಲಿ ಹೊಸದಾಗಿ ಯಾರಿಗೂ ಮಂಜೂರಾಗಿರುವುದಿಲ್ಲ.

ಇ) ವಿವರಗಳನ್ನು ಅನುಬಂಧ- 2 ರಲ್ಲಿ ನೀಡಲಾಗಿದೆ.

ಅನುಬಂಧ-1

ಬೆಳಗಾವಿ ಜಿಲ್ಲೆಯ ಕಲಾವಿದರು ಹಾಗೂ ಜಾನಪದ ಕಲಾಕಾರರಿಂದ ಮಾಸಾಶನ : ಸಹಾಯ ಧನ (ಗೌರವಧನ) ಕೋರಿ ಬಂದಂತಹ ಅರ್ಜಿಗಳ ತಾಲ್ಲೂಕುವಾರು ಅಂಕಿಅಂಶಗಳು :

ಕ್ರಮ ಸಂಖ್ಯೆ	ತಾಲ್ಲೂಕು	ಮಾಸಾಶನ	ಗೌರವಧನ
1.	ಸವದತ್ತಿ	39	5
2.	ಬೈಲಹೊಂಗಲ	49	4
3.	ಹುಕ್ಕೇರಿ	20	2
4.	ಶಹಾಪುರ	-	1
5.	ಬೆಳಗಾಂ	24	3
6.	ಗೋಕಾಕ್	58	6
7.	ರಾಮದುರ್ಗ	73	5

8.	ಅಥಣಿ	17	-
9.	ಚಿಕ್ಕೋಡಿ	9	1
10.	ಖಾನಾಪುರ	11	1
11.	ರಾಯಬಾಗ್	5	1
12.	ಮಾಧವಪುರ	1	-
13.	ಸಂಕೇಶ್ವರ	1	-
		307	29

ಅನುಬಂಧ-2

I. ಮಾಸಾಶನ ಮಂಜೂರಾತಿ ನಿಯಮಗಳು :

1. ಸಾಹಿತ್ಯ, ಕಲೆ ಹಾಗೂ ಇತರೆ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಕಷ್ಟಪರಿಸ್ಥಿತಿಯಲ್ಲಿರುವವರು ಅರ್ಹರು
2. ಇವರ ವಯಸ್ಸು 58 ವರ್ಷಕ್ಕಿಂತ ಕಡಿಮೆ ಇರಬಾರದು.
3. ಆದಾಯ ವರ್ಷಕ್ಕೆ 1800-00 ರೂ. ಗಳ ಒಳಗೆ ಇರಬೇಕು.
4. ಅಂಗವಿಕಲ ಕಲಾವಿದರಿಗೆ ವಯಸ್ಸು 40 ವರ್ಷಗಳಾಗಿದ್ದರೆ ಹಾಗೂ 20 ವರ್ಷಗಳ ಸೇವೆ ಸಲ್ಲಿಸಿದ್ದರೆ, ಮಾಸಾಶನ ಪಡೆಯಲು ಅರ್ಹರು.

II. ಗೌರವಧನ ಮಂಜೂರಾತಿ ನಿಯಮಗಳು :

1. ಅರ್ಜಿದಾರರಿಗೆ ಕನಿಷ್ಠ 55 ವರ್ಷಗಳಾಗಿರಬೇಕು. ಸಂಬಂಧಿಸಿದ ಕ್ಷೇತ್ರದಲ್ಲಿ 25 ವರ್ಷಗಳಿಗಿಂತ ಹೆಚ್ಚು ಸೇವೆ ಸಲ್ಲಿಸಿರಬೇಕು.
2. **ವಿಶೇಷ ಅರ್ಹತೆಗಳು :** ಅರ್ಜಿದಾರರು ಪ್ರಕಟಿಸಿರುವ ಕೃತಿಗಳು ಹಾಗೂ ಲೇಖಿನಗಳನ್ನು ಪರಿಗಣಿಸಾಗುವುದು. ಈ ಪುಸ್ತಕಗಳಿಗೆ ಅಕಾಡೆಮಿಗಳು, ವಿಶ್ವವಿದ್ಯಾನಿಲಯ, ಪರಿಷತ್ತು ಹಾಗೂ ಸರ್ಕಾರ ನೀಡಿರುವ ಮಾನ್ಯತೆ.
3. ಸಂಗೀತ ಕಲಾವಿದರು ಸಾರ್ವಜನಿಕವಾಗಿ ನೀಡುವ ಕಾರ್ಯಕ್ರಮಗಳು ಹಾಗೂ ಕಚೇರಿಗಳು.
4. ಚಿತ್ರಕಲಾವಿದರು ಹಾಗೂ ಶಿಲ್ಪಕಲಾವಿದರು ಪ್ರದರ್ಶಿಸಿರುವ ಕೃತಿಗಳ ಪ್ರದರ್ಶನಗಳು.
5. ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನೀಡಿರುವ ಪ್ರಶಸ್ತಿ ಪುರಸ್ಕಾರಗಳು.
6. ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಭೆ, ಸಮ್ಮೇಳನ ಮತ್ತು ಪ್ರದರ್ಶನಗಳಲ್ಲಿ ಪಾಲ್ಗೊಳ್ಳುವುದು.
7. ರಾಜ್ಯ, ಕೇಂದ್ರ ಅಕಾಡೆಮಿಗಳು ನೀಡಿರುವ ಪ್ರಶಸ್ತಿಗಳು, ಬಹುಮಾನಗಳು.
8. 10,000-00 ರೂ. ಗಳಿಂದ ಕಡಿಮೆ ಆದಾಯ ಇರುವವರು.